ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

**ಆಕ್ರೋಶ** ಆರೋಪಿಗಳ ಕರೆ ತರಲು ಜಮೀರ್ ಮಾಲೀಕತ್ವದ ಬಸ್‌ಗಳ ವ್ಯವಸ್ಥೆ | ಖುದ್ದಾಗಿ ತೆರಳಿ ಆರೋಪಿಗಳ ಕರೆತಂದ ಶಾಸಕ

# ಪಾದರಾಯನಪುರ ಪುಂಡರಿಗೆ ಜಮೀರ್ ಅದ್ಧೂರಿ ಸ್ವಾಗತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಾದರಾಯನಪುರದಲ್ಲಿ ಕೊರೋನಾ ವಾರಿಯರ್ಸ್ ಮೇಲೆ ಹಲ್ಲೆ ನಡೆಸಿದ 126 ಮಂದಿ ಆರೋಪಿಗಳಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ಬುಧವಾರ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಆದರೆ, ಚಾಮರಾಜಪೇಟೆಯ ಶಾಸಕ ಜಮೀರ್ ಅಹಮದ್ ಖಾನ್ ಖುದ್ದು ಹಾಜರಿದ್ದು ಆರೋಪಿಗಳನ್ನು ಅದ್ದೂರಿಯಾಗಿ ಬರಮಾಡಿಕೊಂಡಿರುವುದು ಇದೀಗ ವ್ಯಾಪಕ ಟೀಕೆಗೆ ಕಾರಣವಾಗಿದೆ.

ಪಾದರಾಯನಪುರದ ಕೊರೋನಾ ಸೋಂಕಿತರ ಸಂಪರ್ಕಿತರನ್ನು ಕ್ವಾರಂಟೈನ್ ಮಾಡಲು ಹೋದ ಆರೋಗ್ಯ ಸಿಬ್ಬಂದಿ ಮತ್ತು ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಜಗಜೀವನ್‌ರಾಮ್ ನಗರ ಠಾಣೆ ಪೊಲೀಸರು 126 ಮಂದಿಯನ್ನು ಬಂಧಿಸಿದ್ದರು. ಸೋಮವಾರ (ಜೂ.1) ಆರೋಪಿಗಳಿಗೆ ಹೈಕೋರ್ಟ್ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿತ್ತು. ಹಳೇ ಗುಡ್ಡದಹಳ್ಳಿಯ ಹಜ್ ಭವನದಲ್ಲಿದ್ದ ಬಂಧಿಸಿಡಲಾಗಿದ್ದ ಆರೋಪಿಗಳನ್ನು ಬುಧವಾರ (ಜೂ.3) ಬಿಡುಗಡೆ ಮಾಡಲಾಯಿತು. ಈ ವೇಳೆ ಶಾಸಕ ಜಮೀರ್ ಅಹಮದ್ ಖುದ್ದಾಗಿ ತೆರಳಿ ಬಿಡುಗಡೆಯಾದ ಆರೋಪಿಗಳ ಕುಶಲೋಪರಿ ವಿಚಾರಿಸಿ ತಮ್ಮ ಮಾಲಿಕತ್ವದ ನ್ಯಾಷನಲ್ ಟ್ರಾವಲ್ಸ್‌ನ ಮೂರು ಬಸ್‌ಗಳಲ್ಲಿ ಅದ್ದೂರಿ ಸ್ವಾಗತದೊಂದಿಗೆ ಪಾದರಾಯನಪುರಕ್ಕೆ ಕರೆತಂದಿದ್ದಾರೆ.

ಇನ್ನು ಆರೋಪಿಗಳನ್ನು ಬರ ಮಾಡಿಕೊಳ್ಳುವುದಕ್ಕೆ ಪಾದರಾಯನಪುರದಲ್ಲಿ ದೊಡ್ಡ ಗುಂಪು ಸೇರಿತ್ತು. ಯಾವುದೇ ಸಾಮಾಜಿಕ ಅಂತರ ಇರಲಿಲ್ಲ. ಈ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಶಾಸಕ ವಿರುದ್ಧ ತೀವ್ರ ಟೀಕೆ ವ್ಯಕ್ತವಾಗಿದೆ.



ಹಜ್‌ಭವನದಿಂದ ಹೊರ ಬರುತ್ತಿರುವ ಆರೋಪಿಗಳ ಸ್ವಾಗತಿಸುತ್ತಿರುವ ಜಮೀರ್.

## ಆರೋಪಿಗಳಿಗೆ ತಲಾ ₹10,000 ನೀಡಿದ ಆರೋಪ

ಇನ್ನು ಪಾದರಾಯನಪುರದಲ್ಲಿ ದಾಂಧಲೆ ನಡೆಸಿದ 126 ಮಂದಿಯ ಕುಟುಂಬಕ್ಕೆ ಶಾಸಕ ಜಮೀರ್ ಸೇರಿದಂತೆ ಇತರೆ ಸ್ಥಳೀಯ ಮುಖಂಡರು ತಲಾ ಹತ್ತು ಸಾವಿರ ರುಪಾಯಿಯಂತೆ 12.60 ಲಕ್ಷ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಇದು ಕೂಡಾ ಸಾರ್ವಜನಿಕ ಟೀಕೆಗೆ ಗುರಿಯಾಗಿದೆ. ಕೊರೋನಾ ವಾರಿಯರ್ಸ್ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿಗಳ ಪರ ನಿಂತಿರುವ ಶಾಸಕ ಜಮೀರ್ ಅಹಮದ್ ನಡೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

## ಜಮೀರ್ ವಿರುದ್ಧ ರೇಣುಕಾಚಾರ್ಯ ಕಿಡಿ

**ಬೆಂಗಳೂರು:** ಪಾದರಾಯನಪುರ ಪುಂಡರ ರಕ್ಷಣೆಗೆ ಶಾಸಕ ಜಮೀರ್ ಅಹಮದ್ ನಿಂತಿದ್ದು ದೇಶದ್ರೋಹದ ಕೆಲಸವಾಗಿದ್ದು, ಅವರೊಬ್ಬ ನಾಲಾಯಕ್ ರಾಜಕಾರಣಿ ಹಾಗೂ ದೇಶದ ಸಂಸ್ಕೃತಿಯ ಅರಿವೇ ಇಲ್ಲದವರು ಎಂದು ಮುಖ್ಯಮಂತ್ರಿಗಳ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ವಾಗ್ದಾಳಿ ನಡೆಸಿದ್ದಾರೆ.

ವಿಕಾಸಸೌಧದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾದರಾಯನಪುರ ಗಲಾಟೆಗೆ ನೇರವಾಗಿ ಶಾಸಕ ಜಮೀರ್ ಅಹಮದ್ ಕಾರಣರಾಗಿದ್ದಾರೆ. ಅವರಿಗೆ ಭಾರತ ಸಂಸ್ಕೃತಿಗಿಂತ ಪಾಕಿಸ್ತಾನದ ಸಂಸ್ಕೃತಿ ಮೇಲೆ ಹೆಚ್ಚಿನ ವ್ಯಾಮೋಹ ಹೊಂದಿದ್ದಾರೆ. ಕೊರೋನಾ ವಾರಿಯರ್ಸ್ ಮೇಲೆ ಪುಂಡರು ಹಲ್ಲೆ ಮಾಡಿದ ವೇಳೆ ಬುದ್ಧಿವಾದ ಹೇಳುವ ಬದಲು ಬೆಂಬಲ ನೀಡಿ, ರಕ್ಷಣೆಗೆ ನಿಂತಿದ್ದರು. ಹಣಕಾಸಿನ ನೆರವಿನಿಂದ ಹಿಡಿದು ಜಾಮೀನು ಕೊಟ್ಟು ಜೈಲಿನಿಂದ ಹೊರ ತರುವವರೆಗೂ ಪ್ರಯತ್ನಿಸಿದ್ದಾರೆ. ಅಲ್ಲದೇ, ಜೈಲಿಂದ ಹೊರಗೆ ಬಂದಿರುವ ಪುಂಡರನ್ನು ಸ್ವಾಗತಿಸುವ ಕೆಟ್ಟ ಕೆಲಸ ಮಾಡಿದ್ದಾರೆ. ಆತ ನಂಬರ್ ಒನ್ ದೇಶದ್ರೋಹಿ ಎಂದು ಟೀಕಿಸಿದ್ದಾರೆ.